1	2	3	4	5
369.	ನರಸಿಂಹರೆಡ್ಡಿ, ವೆಂಕಟಾಪುರ	3-10-02	20.690	307
370.	ಎನ್. ಬೈರಪ್ಪರೆಡ್ಡಿ, ರಾಯನಕೊಲ್ಲು	24-10-02	13.450	185
371.	ಪಿ. ವೆಂಕಟಾಚಲಯ್ಯ, ಪಚ್ಚೆರಂಗನಹಳ್ಳಿ	14-10-02	14.210	142
372.	ಚೌಡರೆಡ್ಡಿ, ಸುರೇನಹಳ್ಳಿ	17-10-02	19.240	192
373.	ಹೆಚ್. ಸಿದ್ಧಲಿಂಗಪ್ಪ, ಹಿಗ್ಗೇನಹಳ್ಳಿ	3-10-02	22.780	228
374.	ಪಿ.ವಿ. ಸುಬ್ರಮಣಿ, ಪುರ	31-10-02	30.850	309
375.	ನಾಗರಾಜಪ್ಪ, ಮಾದಹಳ್ಳಿ	17-9-02	13.820	138
376.	ಒಡಸಲಪ್ಪ, ಹಿಗ್ಗೇನಹಳ್ಳಿ	3-10-02	32.830	328
377.	ಸಂಜೀವರಾಮಯ್ಯ, ಹಿಗ್ಗೇನಹಳ್ಳಿ	6-10-02	43.060	431
378.	ಗಂಗಾಧರಪ್ಪ, ಹಳೇಹಳ್ಳಿ	19-10-02	10.860	109

ಮೈಸೂರಿನ ವಿಕ್ರಾಂತ್ ಕಾರ್ಖಾನೆ ಷೇರು ಮಾರಾಟ

281(2317) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನ ವಿಕ್ರಾಂತ್ ಟೈರ್ಸ್ ಕಾರ್ಖಾನೆಯಲ್ಲಿ ಖಾಸಗಿಯವರು ಹೊಂದಿರುವ ಷೇರುಗಳು ಎಷ್ಟು ಹಾಗೂ ಅವರುಗಳು ಯಾರು, ಸರ್ಕಾರದ ಷೇರುಗಳು ಎಷ್ಟು ವಿವರ ನೀಡುವುದು;

ಆ) ರಾಜ್ಯ ಸರ್ಕಾರವು ತನ್ನ ಷೇರುಗಳನ್ನು ಮಾರಾಟ ಮಾಡುವ ಪ್ರಯತ್ನದಲ್ಲಿದೆ ಎಂಬ ಅಲ್ಲಿನ ಕಾರ್ಮಿಕರ ಅಭಿಪ್ರಾಯ ನಿಜವೇ;

ಇ) ಈ ವಿಚಾರದಲ್ಲಿ ಕಾರ್ಮಿಕರು ಆತಂಕಗೊಂಡಿದ್ದು, ವಿರೋಧ ವ್ಯಕ್ತಪಡಿಸುತ್ತಿರುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಅ) ವಿಕ್ರಾಂತ್ ಟೈರ್ಸ್ ಲಿ: ಕಂಪನಿಯಲ್ಲಿ ಕೆ.ಎಸ್.ಐ.ಐ.ಡಿ.ಸಿ.ಯ 26% ಹಾಗೂ ಎಂ.ಎಸ್.ಐ.ಎಲ್.ನ 0.57% ಷೇರುಗಳಿವೆ. ಜಿ.ಕೆ. ಇಂಡಸ್ಟ್ರೀಸ್ ಲಿ: ನವರು 52.31% ಷೇರುಗಳನ್ನು ಹೊಂದಿದ್ದು, ಉಳಿದ 21.12% ಷೇರುಗಳನ್ನು ಹಣಕಾಸು ಸಂಸ್ಥೆಗಳು ಹಾಗೂ ಜನಸಾಮಾನ್ಯರು ಹೊಂದಿದ್ದಾರೆ.

ಆ) ವಿಕ್ರಾಂತ್ ಟೈರ್ಸ್ ಲಿ: ನಲ್ಲಿ ತಾನು ಹೊಂದಿರುವ ಷೇರುಗಳನ್ನು ಕೆ.ಎಸ್.ಐ.ಐ.ಡಿ.ಸಿ. ಸಧ್ಯಕ್ಕೆ ಮಾರಾಟ ಮಾಡುವ ಪ್ರಸ್ತಾವ ಇಲ್ಲದಿದ್ದರೂ, ವಿಕ್ರಾಂತ್ ಟೈರ್ಸ್ ಲಿ: ನ್ನು ಜೆ.ಕೆ. ಇಂಡಸ್ಟ್ರೀಸ್ ನಲ್ಲಿ ವಿಲೀನಗೊಳಿಸುವ ಪ್ರಸ್ತಾವನೆ ಇರುವುದರಿಂದ, ವಿಲೀನಗೊಂಡ ಪಕ್ಷದಲ್ಲಿ ಷೇರುಗಳು ವಿಲೀನಗೊಂಡ ಕಂಪನಿಯ ಷೇರುಗಳಾಗಿ ಹಂಚಿಕೆಯಾಗುತ್ತದೆ.

ಇ) ಕಾರ್ಮಿಕರ ಆತಂಕ ನಿರಾಧಾರವಾಗಿದೆ. ಮಾನ್ಯ ಉಚ್ಚ ನ್ಯಾಯಾಲಯದ, ಮುಂದೆ ವಿಕ್ರಾಂತ್ ಕಾರ್ಖಾನೆಯನ್ನು ಜೆ.ಕೆ. ಇಂಡಸ್ಟ್ರೀಸ್‌ನಲ್ಲಿ ವಿಲೀನ ಪ್ರಕ್ರಿಯೆಯ ಸಲುವಾಗಿ

ಹಾಜರುಪಡಿಸಿರುವ ಸ್ಕೀಮ್‌ನ ಪ್ರಕಾರ ಕಾರ್ಮಿಕರ / ನೌಕರರ ಉದ್ಯೋಗ ಮತ್ತು ತತ್ಸಂಬಂಧವಾಗಿ ಷರತ್ತುಗಳು ಸಂಪೂರ್ಣವಾಗಿ ರಕ್ಷಿಸಲ್ಪಟ್ಟಿವೆ.

ದಿನಾಂಕ 27-3-2003ರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೋತ್ತರ

ರಾಜ್ಯದಲ್ಲಿರುವ ಪಶು ಚಿಕಿತ್ಸಾ ಆಸ್ಪತ್ರೆಗಳು

2069 (2535) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶು ಚಿಕಿತ್ಸಾಲಯಗಳ ಮತ್ತು ಪಶು ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು; ರಾಷ್ಟ್ರೀಯ ಕೃಷಿ ಆಯೋಗದ ಸೂತ್ರದ ಸಂಖ್ಯೆಗೆ ಅನುಗುಣವಾಗಿದೆಯೇ; ಕಡಿಮೆ ಇದ್ದಲ್ಲಿ ಎಷ್ಟು ಕಡಿಮೆ ಇದೆ;

ಆ) ಈ ಸಾಲಿನಲ್ಲಿ ಎಷ್ಟು ಪಶುಚಿಕಿತ್ಸಾ ಕೇಂದ್ರವನ್ನು ಮೇಲ್ದರ್ಜೆಗೇರಿಸಲಾಗಿದೆ; ಚಿಕಿತ್ಸಾಲಯಗಳಲ್ಲಿ ವೈದ್ಯ ಮತ್ತು ಇತರೆ ಸಿಬ್ಬಂದಿಗಳ ಖಾಲಿ ಇರುವ ಹುದ್ದೆ ಎಷ್ಟು; ಎಷ್ಟು ಸಮಯದಿಂದ ಖಾಲಿ ಇದೆ; ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳು ಏನು;

ಇ) ಬರುವ ಸಾಲಿನಲ್ಲಿ ಎಷ್ಟು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಪಶು ಚಿಕಿತ್ಸಾಲಯಗಳು 1252

ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು 1655

ಇಲ್ಲ.

ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುವೈದ್ಯರು ಒಳಗೊಂಡ ಸಂಸ್ಥೆ ಇರಬೇಕು. ಕರ್ನಾಟಕ ರಾಜ್ಯದಲ್ಲಿ 1.68 ಕೋಟಿ ಜಾನುವಾರು ಘಟಕಗಳಿದ್ದು, 3365 ಪಶುವೈದ್ಯರ ಒಳಗೊಂಡ ಸಂಸ್ಥೆಗಳು ಇರಬೇಕಾಗಿದ್ದು ರಾಜ್ಯದಲ್ಲಿ ಕೇವಲ 1546 ಪಶುವೈದ್ಯರನ್ನೊಳಗೊಂಡ ಸಂಸ್ಥೆಗಳ ಇದ್ದು 1819 ಪಶುವೈದ್ಯರನ್ನೊಳಗೊಂಡ ಸಂಸ್ಥೆಗಳ ಕೊರತೆ ಇರುತ್ತದೆ. ಹಾಲಿ ಕೆಲಸ ನಿರ್ವಹಿಸುತ್ತಿರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಹಂತ ಹಂತವಾಗಿ ಪಶು ಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸಿ ಪಶುವೈದ್ಯರ ಒಳಗೊಂಡ ಸಂಸ್ಥೆಗಳ ಕೊರತೆಯನ್ನು ಸರಿಪಡಿಸಲಾಗುವುದು.

ಇ) 200 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯನ್ನಾಗಿ ಮೇಲ್ದರ್ಜೆಗೇರಿಸಲಾಗುವುದು.

ಖಾಲಿ ಪಶುವೈದ್ಯ ಅಧಿಕಾರಿಗಳ ಹುದ್ದೆಗಳು 501, ಈ ಹುದ್ದೆಗಳು ಆಸ್ಪತ್ರೆಯಲ್ಲಿ ಖಾಲಿ ಇವೆ. ಈ ಖಾಲಿ ಹುದ್ದೆಗಳು ಆಗ್ಗಿಂದಾಗ್ಗೆ, ಖಾಲಿ ಆಗುತ್ತಿವೆ. ಸಿಬ್ಬಂದಿ ಹುದ್ದೆಗಳು 897, ಈ ಹುದ್ದೆಗಳು 2002 ರಿಂದ ಖಾಲಿ ಇವೆ. ಮೇಲ್ಕಂಡ ಹುದ್ದೆಗಳನ್ನು ಮುಂಬಡ್ತಿ ಮತ್ತು ನೇರ ನೇಮಕಾತಿ ಮೂಲಕ ಪರಿಶೀಲಿಸಿ ಹಂತಹಂತವಾಗಿ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

ಇ) ಮುಂದಿನ ಸಾಲಿನಲ್ಲಿ 147 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯನ್ನಾಗಿ ಮೇಲ್ದರ್ಜೆಗೇರಿಸಲಾಗುವುದು.

ಮೈಸೂರು ಸಕ್ಕರೆ ಕಾರ್ಖಾನೆಯ ಖಾಸಗೀಕರಣ

2070 (2609) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?